# ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ನಡವಳಿಗಳು

**ವಿಷಯ:** ಹಾಸನ ಜಿಲ್ಲೆಯಾದ್ಯಂತ ದಂಡ ಪ್ರಕ್ರಿಯೆ ಸಂಹಿತೆ ಕಲಂ 144 ರನ್ವಯ ನಿಷೇಧಾಜ್ಞೆ ಹೊರಡಿಸುವ ಕುರಿತು.

***

**ಪ್ರಸ್ತಾವನೆ:**

ದಿನಾಂಕ: 30/04/2009 ರಂದು ಹಾಸನ ಜಿಲ್ಲಾದ್ಯಂತ ಸಾರ್ವತ್ರಿಕ ಲೋಕಸಭಾ ಚುನಾವಣೆ ನಡೆಯಲಿದ್ದು, ಸಾಮಾನ್ಯ ಮತದಾರನೂ ಸಹ ನಿರ್ಭಯವಾಗಿ ಹಾಗೂ ಶಾಂತಿಯುತವಾಗಿ ಮತ ಚಲಾಯಿಸುವ ವಾತಾವರಣ ಇರಬೇಕಾಗಿದ್ದು, ಯಾವುದೇ ಮೆರವಣಿಗೆ, ಗುಂಪು ಸೇರುವುದು, ಬಹಿರಂಗ ಪ್ರಚಾರ ಕೈಗೊಳ್ಳುವುದು, ಘೋಷಣೆ ಕೂಗುವುದು, ಆಯುಧ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದು ಮುಂತಾದ ಅಹಿತಕರ ಘಟನೆಗಳು ಸಂಭವಿಸಬಹುದೆಂದು ಅಭಿಪ್ರಾಯಪಟ್ಟು, ದಿನಾಂಕ:28/04/2009 ರ ಸಾಯಂಕಾಲ 6-00 ಗಂಟೆಯಿಂದ ದಿನಾಂಕ: 01/05/2009 ರ ಬೆಳಿಗ್ಗೆ 6.00 ಗಂಟೆಯವರೆಗೆ ಭಾರತ ದಂಡ ಪ್ರಕ್ರಿಯೆ ಸಂಹಿತೆ ಕಲಂ 144 ರನ್ವಯ ಹಾಸನ ಜಿಲ್ಲಾದ್ಯಂತ ನಿಷೇಧಾಜ್ಞೆಯನ್ನು ಜಾರಿಗೊಳಿಸುವುದು ಅತ್ಯಾವಶ್ಯವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ ಸಂಖ್ಯೆ: ಎಂ.ಎ.ಜಿ. 19/09-10 ದಿನಾಂಕ:24/04/2009

ಹಾಸನ **ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ನವೀನ್ ರಾಜ್ ಸಿಂಗ್, ಭಾ.ಆ.ಸೇ.,** ಆದ ನಾನು ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ 1973 ಕಲಂ 144 ರಡಿ ನನಗೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ದಿನಾಂಕ:28/04/2009 ರ ಸಾಯಂಕಾಲ 6-00 ಗಂಟೆಯಿಂದ ದಿನಾಂಕ: 01/05/2009 ರ ಬೆಳಿಗ್ಗೆ 6-00 ಗಂಟೆಯವರೆಗೆ ಹಾಸನ ಜಿಲ್ಲೆಯಾದ್ಯಂತ ಎಲ್ಲಾ ಸಾರ್ವಜನಿಕ ಪ್ರದೇಶದಲ್ಲಿ ಸಾರ್ವಜನಿಕರು, ವಿವಿಧ ರಾಜಕೀಯ ಪಕ್ಷದವರು, ಸಂಘ-ಸಂಸ್ಥೆಯವರು 5 ಜನಕ್ಕಿಂತ ಮೇಲ್ಪಟ್ಟು ಗುಂಪು ಸೇರುವುದು, ಯಾವುದೇ ತರಹದ ಆಯುಧ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದು, ಮೆರವಣಿಗೆ ನಡೆಸುವುದು, ಘೋಷಣೆ ಕೂಗುವುದು ಹಾಗೂ ಶಾಂತಿ ಮತ್ತು ಶಿಸ್ತು ಪಾಲನೆಗೆ ಭಂಗ ತರುವ ರೀತಿಯಲ್ಲಿ ವರ್ತಿಸುವುದನ್ನು ಈ ಮೂಲಕ ನಿಷೇಧಿಸಿರುತ್ತೇನೆ.

ಸಾರ್ವತ್ರಿಕ ಚುನಾವಣೆ-2009 ರ ಸಂಬಂಧ ಮಸ್ಟರಿಂಗ್ ಸೇರಿದಂತೆ ಚುನಾವಣಾ ಸಿಬ್ಬಂದಿ, ಶಾಂತಿಯುತ ಮತದಾನಕ್ಕಾಗಿ ಸರದಿಯಲ್ಲಿರುವ ಮತದಾರರು ಹಾಗೂ ರಕ್ಷಣಾ ಸಿಬ್ಬಂದಿಯ ಚಲನ-ವಲನಗಳಿಗೆ ಈ ಆದೇಶದಿಂದ ವಿನಾಯಿತಿ ನೀಡಲಾಗಿದೆ.

ಈ ಆದೇಶವು ದಿನಾಂಕ:28/04/2009ರ ಸಾಯಂಕಾಲ 6-00 ಗಂಟೆಯಿಂದ ದಿನಾಂಕ:01/05/2009 ರ ಬೆಳಿಗ್ಗೆ 6-00 ಗಂಟೆಯವರೆಗೆ ಜಾರಿಯಲ್ಲಿರುತ್ತದೆ.

(ನವೀನ್ ರಾಜ್ ಸಿಂಗ್)
ಜಿಲ್ಲಾ ದಂಡಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ

ಪ್ರತಿಯನ್ನು:

1. ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನರವರಿಗೆ ಸೂಕ್ತ ಕ್ರಮಕ್ಕಾಗಿ.
2. ಅಪರ ಆರಕ್ಷಕ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ಹಾಗೂ ಉಪ ಅಧೀಕ್ಷಕರು, ಹಾಸನ/ ಹೊಳೆನರಸೀಪುರ/ ಅರಸೀಕೆರೆ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಉಪ ವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ.
4. ಚುನಾವಣಾಧಿಕಾರಿಗಳು,ಹಾಸನ/ಅರಸೀಕೆರೆ/ಅರಕಲಗೂಡು/ಹೊಳೆನರಸೀಪುರ/ ಶ್ರವಣಬೆಳಗೊಳ/ಬೇಲೂರು/